# CBSE-REGIONAL OFFICE, CHENNAI

**ANSWER KEY (MARKING SCHEME): AISSCE-2019**

**CLASS : 12 SUBJECT: KANNADA –115 MARKS – 100**

================================================================================

## ವಿಭಾಗ – ಎ[ವ್ಯಾಕರಣ] : 25 ಅಂಕಗಳು

**1.** [ಅ] ಪ್ರಶ್ನಾರ್ಥಕ ವಾಕ್ಯ : ಗದ್ಯಪ್ರಕಾರಗಳಲ್ಲಿ ಪ್ರಬಂಧ ಹುಲುಸಾಗಿ ಬೆಳೆಯಿತೆ? –> 1

[ಆ] ನಿಷೇಧಾರ್ಥಕ ರೂಪ : ಕಾರ್ಯಕ್ರಮ ನಿರೂಪಣೆ ತುಂಬಾ ಗಂಭೀರವಾಗಿ ಇರಲಿಲ್ಲ/ಇರದು –>1

[ಇ] ಸಾಮಾನ್ಯ ವಾಕ್ಯ ಪರಿವರ್ತನೆ: –>1

*ಕಾರವಾರದಲ್ಲಿ ಮಲೇರಿಯಾ ಹಬ್ಬಿತ್ತು

*ಆದ್ದರಿಂದ ಅವರು ಮಲೇರಿಯಾದಿಂದ ಬಳಲಬೇಕಾಯಿತು.

[ಈ] ಭವಿಷತ್ಕಾಲ : ಭಾರತ ಸರ್ಕಾರ ಅವರಿಗೆ ಉನ್ನತ ಪದವಿಯನ್ನು ನೀಡುವುದು. –> 1

[ಉ] ಕ್ರಿಯಾಪದ – ಕಾಪಾಡುವವನು , ಧಾತು – ಕಾಪಾಡು –> $^1/_2+^1/_2$ =1

**2.** ಕನ್ನಡ ರೂಪಾಂತರ : –> 5 (ರೂಪಾಂತರಶೈಲಿ, ಅರ್ಥ ಮತ್ತು ಸಂಯೋಜನೆಯನ್ನು ಗಮನದಲ್ಲಿರಿಸುವುದು)

ಈಗಿನ ಯುವಜನತೆ ತಮ್ಮ ಆಲೋಚನೆಗಳನ್ನು ಸೃಜನಾತ್ಮಕ ಕ್ರಿಯೆಗಳಾಗಿ ಪರಿವರ್ತಿಸಲು ಬಹಳ ವಿಚಾರಗಳನ್ನು ಮತ್ತು ಅಪರಿಮಿತ ಶಕ್ತಿಯ ಮೂಲವನ್ನು ಹೊಂದಿದ್ದಾರೆ. ಅವರು ಬಲವಾದ ಅನಿಸಿಕೆ ಹೊಂದಿ ಯಾವುದರ ವಿರುದ್ಧವಾದರೂ ದನಿಯೆತ್ತಲು ಎದೆಗುಂದುವುದಿಲ್ಲ. ಯುವಜನರು ಪ್ರಚಲಿತ ವಿದ್ಯಮಾನಗಳನ್ನು ಮತ್ತು ಆಧುನಿಕ ತಂತ್ರ ಜಾನದ ಬಗ್ಗೆ ಸಮಯಕ್ಕೆ ತಕ್ಕಂತೆ ಮಾಹಿತಿ ಹೊಂದಿರುತ್ತಾರೆ. ಆದ್ದರಿಂದ ಎಲ್ಲಾ ರೀತಿಯ ಉದ್ಯೋಗಗಳಿಗೆ ತಕ್ಕವರಾಗಿದ್ದಾರೆ. ಈಗಿನ ಯುವಜನರು ತಮ್ಮ ಗುರಿಯನ್ನು ಸಾಧಿಸಲು ಯಾವುದೇ ರೀತಿಯ ಕಠಿಣ ಪರಿಸ್ಥಿತಿಯನ್ನು ಮತ್ತು ಸವಾಲುಗಳನ್ನು ಎದುರಿಸಲು ಸಿದ್ಧರಿದ್ದಾರೆ. ಅವರು ತಮ್ಮ ಜೀವನಶೈಲಿಯನ್ನು ಜೀವನಕ್ರಮವನ್ನಾಗಿಸಲು ತಮ್ಮ ಮೇಲೆ ಮತ್ತು ತಮ್ಮ ಸಾಮರ್ಥ್ಯದ ಮೇಲೆ ಬಲವಾಗಿ ನಂಬಿದ್ದೆ ಅವರನ್ನು ಹೆಚ್ಚಿಗೆ ಯಶಸ್ವಿಯಾಗಿಸಿದೆ.

ರಾಷ್ಟ್ರವು ಉತ್ತಮ ತಾಣವಾಗಿರಲೆಂದು ಯುವಜನರು ಬಯಸುತ್ತಾರೆ. ಅವರು ಸಮಾಜವನ್ನು ಉತ್ತಮಸ್ಥಳವನ್ನಾಗಿಸಲು ರಾಷ್ಟ್ರದ ವ್ಯವಸ್ಥೆಯನ್ನು ಪರಾಮರ್ಶಿಸುವದರೊಂದಿಗೆ ಅದರ ವಿರುದ್ಧ ಎದುರು ನಿಲ್ಲಬಹುದು. ಅವರು ತಮ್ಮ ಹಕ್ಕುಗಳಿಗಾಗಿ ಮತ್ತು ಬೇರೆಯವರ ಹಕ್ಕುಗಳ ಪರವಾಗಿ ಹೋರಾಡಲು ಸಶಕ್ತರಾಗಿರುತ್ತಾರೆ. ಅವರು ತಮ್ಮ ಮತ್ತು ಪರರ ಹಕ್ಕುಗಳನ್ನು ಬೆಂಬಲಿಸಲು ಮತ್ತು ತಪ್ಪುಗಳ ವಿರುದ್ಧ ದನಿಯೆತ್ತಲು ಯಾವತ್ತಿಗೂ ಹಿಂಜರಿಯುವುದಿಲ್ಲ. ಅವರು ಸಾಮಾಜಿಕ ಪಿಡುಗುಗಳ ವಿರುದ್ಧ ಹೋರಾಡಬಯಸುತ್ತಾರೆ. ಅದು ಭ್ರಷ್ಟಾಚಾರವೇ ಇರಲಿ, ಅಸಮಾನತೆಯೇ ಇರಲಿ ಅಥವಾ ಭಯೋತ್ಪಾದನೆಯೇ ಇರಲಿ, ಅವರು ಲಿಂಗತಾರತಮ್ಯ, ಲೈಂಗಿಕ ಕಿರುಕುಳ, ಧಾರ್ಮಿಕ ವಿಚಾರಗಳ ವಿರುದ್ಧ ದನಿಯೆತ್ತಲು ಸಾಮಾಜಿಕ ಜಾಲತಾಣಗಳನ್ನು ಮತ್ತು ಬೇರೆ ಬೇರೆ ವೇದಿಕೆಗಳನ್ನು ಬಳಸುತ್ತಾರೆ. ಅವರು ಸುಮ್ಮನೆ ಕಣ್ಣುಮುಚ್ಚಿ ಒಳ್ಳೆಯದಲ್ಲದ ಅಥವಾ ಅಮಾನವೀಯ ಹೇಳಿಕೆಗಳನ್ನು ಸ್ವೀಕರಿಸುವುದಿಲ್ಲ.

**3.** ಪ್ರಸ್ತಾರ , ಗಣ ವಿಂಗಡಣೆ ಹಾಗೂ ಛಂದಸ್ಸಿನ ಹೆಸರು (ಎರಡಕ್ಕೆ) : –> $2^1/_2 + 2^1/_2$ = 5

[ಅ] ಕುರುಕುಳನಂದನಂ ಪವನನಂದನನೆಂಬ ಮದಾಂಧಗಂಧಸಿಂ

/ನ/ ಜ/ ಭ/ ಜ/ ಜ/ ಜ/ ರ/

/UUU/U-U/-UU/U-U/U-U/U-U/-U-/ –>ಚಂಪಕಮಾಲಾ ವೃತ್ತ (ಅಕ್ಷರ ಗಣ)

[ಆ] ಅರಿಕೇಸರಿಯೆಂಬಂ ಸುಂ

ದರಾಂಗನತ್ಯಂತ ವಸ್ತುವಂ ಮದಕರಿಯಂ

/UU-/UU-/- -/ –> 4/4/4/=12

/U-U/- -/U-U/-UU/UU-/ –> 4/4/4/4/4=20 ಕಂದ ಪದ್ಯ (ಮಾತ್ರಾಗಣ)

[ಇ] ಹಲಗೆ ಬಳಪವ ಪಿಡಿಯದೊಂದ

ಗ್ಗಳಿಕೆ ಪದವಿಟ್ಟಳುಪದೊಂದ

ಗ್ಗಳಿಕೆ ಪರರೊಡ್ಡವದ ರೀತಿಯ ಕೊಳ್ಳದಗ್ಗಳಿಕೆ

/UUU/UUUU/UUU/- -/ –> 3/4/3/4=14

/ UUU/UU-/UUU/- -/ –> 3/4/3/4=14

/ UUU/UU-/UUU/-UU/-U/-UU-/-/ –> 3/4/3/4/3/4+2 = 23 ಭಾಮಿನೀ ಷಟ್ಪದಿ(ಮಾತ್ರಾಗಣ)

[ಈ] ಸೊಂಪಿನಿಂ ಕಂಪಿಡುವ ಸಂಪಗೆಗಳಂ ಕೊಂಡು

ಹೊಂಪೆಸೆವ ಹೊಂಗೇದಗೆಯ ಹೂಗಳಂ ಕೊಂಡು

/-U-/ -UUU/-UUU/- -U/ -> 5/5/5/5/=20

/ -UUU/- -U/UU-U/- -U/ -> 5/5/5/5/=20 ಲಲಿತ ರಗಳೆ (ಮಾತ್ರಾಗಣ)

4. ಗಾದೆ ಮಾತುಗಳ ವಿಸ್ತರಣೆ (ಬೇಕಾದ ಎರಡಕ್ಕೆ) : –> $2^1/_2 + 2^1/_2 = 5$
ಆರಂಭ + ಹೊರ ಅರ್ಥ+ಒಳ ಅರ್ಥ+ಅನ್ವಯ –>$^1/_2 + ^1/_2$ + ½ + 1 = $2^1/_2$

5. ಸೂಚನೆಯಂತೆ ಬರೆಯುವ ಉತ್ತರಗಳು

[ಅ] ಸಮಾನಾರ್ಥಕ ಪದ i) ಮನೆ – ಆಲಯ/ಗೃಹ/ಸದನ –> $^1/_2$
ii)ಅಡವಿ – ಕಾಡು/ ಅರಣ್ಯ/ ಕಾನನ -> $^1/_2$
ಅಥವಾ
ನಾನಾರ್ಥಗಳು – ಹೊಳೆ = ನದಿ, ಪ್ರಕಾಶಿಸು/ಮಿಂಚುವುದು -> $^1/_2 + ^1/_2$

[ಆ] ಜೋಡು ನುಡಿಗಳ ಸ್ವಂತ ವಾಕ್ಯ ಪ್ರಯೋಗ –> 1+1=2
ವಾಕ್ಯದ ಅರ್ಥವನ್ನು ಗಮನಿಸಿ ಅಂಕ ನೀಡುವುದು.
ಅಥವಾ
ನುಡಿಗಟ್ಟುಗಳ ಸ್ವಂತ ವಾಕ್ಯ ಪ್ರಯೋಗ –>1+1=2
ವಾಕ್ಯದ ಅರ್ಥವನ್ನು ಗಮನಿಸಿ ಅಂಕ ನೀಡುವುದು.

[ಇ] ಬಿಡಿಸಿ ಬರೆಯುವುದು: –> 1+1=2
i) ರಸ್ತೆಯಂಚಿನಲ್ಲಿ –> ರಸ್ತೆಯ + ಅಂಚಿನಲ್ಲಿ
ii) ಗೃಹದೊಳಗಿದ್ದು –> ಗೃಹದ + ಒಳಗಿದ್ದು/ ಗೃಹದೊಳಗೆ + ಇದ್ದು/ ಗೃಹದ +ಒಳಗೆ + ಇದ್ದು
ಅಥವಾ
ಪದಗಳಲ್ಲಿನ ಪ್ರತ್ಯಯ ಮತ್ತು ವಿಭಕ್ತಿ ಗುರುತಿಸುವುದು.
i) ದುಃಖಮಂ –> ಅಮ್, ದ್ವಿತೀಯಾ
ii) ನೆಲದಲ್ಲಿ –> ಅಲ್ಲಿ, ಸಪ್ತಮೀ

## ವಿಭಾಗ–ಬಿ [ಅರ್ಥಗ್ರಹಿಕೆ] :10 ಅಂಕಗಳು

6. ಕೆಳಗಿನ ಗದ್ಯಭಾಗವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿ:
[ಅ] ತಕ್ಷಶಿಲೆಯಲ್ಲಿ–> [1]
[ಆ] ದೂರದ ಬನಾರಸ್, ರಾಜಗೃಹ, ಮಿಥಿಲಾ, ಉಜ್ಜೈನಿ, ಕುರು ಮೊದಲಾದ ಭಾಗಳಿಂದ ವಿದ್ಯಾರ್ಥಿಗಳು ಅಧ್ಯಯನಕ್ಕೆಂದು ಧಾವಿಸಿ ಬರುತ್ತಿದ್ದರು. ಆನಂತರದ ದಿನಗಳಲ್ಲಿ ಗ್ರೀಕ್‌ನ ಮಿಲಿಂದನಂಥವರೂ ಇಲ್ಲಿ ಶ್ರುತಿ, ಸ್ಮೃತಿಗಳ ಅಧ್ಯಯನದಲ್ಲಿ ತೊಡಗಿದ್ದರು. –> [2]
[ಇ] ಭರತನ ಮಗ ತಕ್ಷ –> [1]
[ಈ] ಶ್ರೇಷ್ಠ ವಿಶ್ವವಿದ್ಯಾಲಯ ತಕ್ಷಶಿಲಾದ ವೈಶಿಷ್ಟ್ಯವೆಂದರೆ ಅಲ್ಲಿ ಜಾತಿ ಭೇದವಿರದಂತೆ, ಬಡವ-ಬಲ್ಲಿದನೆಂಬ ವ್ಯತ್ಯಾಸವೂ ಇರಲಿಲ್ಲ. ರಾಜನ ಮಕ್ಕಳು, ವ್ಯಾಪಾರಿಗಳ ಮಕ್ಕಳು ಮತ್ತು ಅತಿ ಬಡ ವಿದ್ಯಾರ್ಥಿಗಳೂ ಜೊತೆಗೂಡಿಯೇ ಕಲಿಯುತ್ತಿದ್ದರು. ಸಿರಿವಂತರೇ ಇರಲಿ, ಬಡವರೇ ಇರಲಿ ಸರಳವಾಗಿ, ಸಮಾನವಾಗಿ ಬದುಕಲೇಬೇಕಿತ್ತು. –> [2]

7. ಪದ್ಯದ ಸಾರಾಂಶ : –> 4
ಪದ್ಯದ ಅರ್ಥ, ವಿವರಣೆ ಮತ್ತು ಸಾರಾಂಶಗಳ ಅಂಶಗಳನ್ನು ಗಮನಿಸಿ ಅಂಕಗಳನ್ನು ನೀಡುವುದು

## ವಿಭಾಗ– ಸಿ [ಬರೆವಣಿಗೆ] : 15 ಅಂಕಗಳು

8. ಅನುಭವ – ಬರವಣಿಗೆ : –> 5
ವಿಷಯ ಸಂಗ್ರಹ, ವಾಕ್ಯಸಂಯೋಜನೆ, ಅಭಿವ್ಯಕ್ತಿಗಳನ್ನು ಗಮನಿಸಿ ಅಂಕಗಳನ್ನು ನೀಡುವುದು.

9. ಪತ್ರಿಕಾ ಸಂಪಾದಕರಿಗೆ ಪತ್ರ: [5]
ಇಂದ ಮತ್ತು ಗೆ – ವಿಳಾಸ –> 1, ಒಡಲು –> 1, ವಿಷಯ ಸಂಯೋಜನೆ –> 2, ಮುಕ್ತಾಯ –>1,

10. ಗದ್ಯಭಾಗದ ಸಂಕ್ಷೇಪಣೆ : –> 5
ಗದ್ಯದ ಸಂಪೂರ್ಣ ಅರ್ಥ, ವಾಕ್ಯಸಂಯೋಜನೆ, ಸಂಕ್ಷಿಪ್ತತೆಯನ್ನು ಗಮನಿಸಿ ಅಂಕಗಳನ್ನು ನೀಡುವುದು.

## ವಿಭಾಗ-ಡಿ[ಪಠ್ಯಗಳ ಅಧ್ಯಯನ] : 50 ಅಂಕಗಳು

### ಗದ್ಯಭಾಗ

**11.** ಒಂದು ವಾಕ್ಯದ ಉತ್ತರಗಳು : (ನಾಲ್ಕಕ್ಕೆ) ->1*4=4

[ಅ] ಮನೋರಮೆ ಬಹುಮಾನವಾಗಿ ತನ್ನನ್ನೇ ಕೊಡುವೆನೆಂದಳು.

[ಆ] ಎ.ಆರ್.ಕೃಷ್ಣಶಾಸ್ತ್ರಿಗಳು ಹೈದರಾಬಾದ್‌ನಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

[ಇ] ಕೆಂಪುಪಟ್ಟಿಗೆ ಸೇರಿದ ಪ್ರಾಣಿ ಸಿಂಹಬಾಲದ ಕೋತಿ.

[ಈ] 'ಕಿಡ್ನಿಸ್ಟೋನ್' ಬಗ್ಗೆ ತಿಳಿಯಲು ಲೇಖಕಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಮೂಲೆಮನೆ ಮುದ್ದೇಗೌಡರು ಮತ್ತು ಕಮಲಮ್ಮನವರನ್ನು ಭೇಟಿ ಮಾಡಿದರು.

[ಉ] ಧಣಿ ಎಂದಿಗೂ ಒಕ್ಕಲ ಮಕ್ಕಳ ಮಾತನ್ನು ನಂಬುವುದಿಲ್ಲ.

**12.** ಎರಡು-ಮೂರು ವಾಕ್ಯಗಳ ಉತ್ತರಗಳು : (ಎರಡಕ್ಕೆ) -> 2*2=4

[ಅ] ತಾನು ಅದೃಷ್ಟವಂತೆ ಎಂದು ಲೇಖಕಿ ನೇಮಿಚಂದ್ರ ಭಾವಿಸಲು ಕಾರಣವೇನು?

ಒಂದು ದಿನ ನಿರೂಪಕಿಯ ಮನೆಗೆ ಬಂದ ಸೀತಾ ನಿರೂಪಕಿಯಲ್ಲಿ 'ನೀನು ಬಿಡೆ ತುಂಬಾ ಅದೃಷ್ಟವಂತೆ ಎಂದು ಹಲುಬಿದಳು'. ಆಗ ನಿರೂಪಕಿಯವರು ಖಂಡಿತಾ ನಾನು ಅದೃಷ್ಟವಂತೆ ಕಣೆ, ನಮ್ಮ ಭಾರತದಲ್ಲಿ ಎಷ್ಟು ಜನ ಹೆಣ್ಣು ಮಕ್ಕಳಿಗೆ ಓದೋ ಅವಕಾಶ ಸಿಗುತ್ತೆ ಹೇಳು. ವಿದ್ಯಾವಂತರ ಕುಟುಂಬದಲ್ಲಿ ಹುಟ್ಟಿದೆನಲ್ಲಾ ಅದು ನನ್ನ ಅದೃಷ್ಟ. ಎಷ್ಟು ಬೇಕಾದರೂ ಓದಿಸ್ತೇನೆ ಅಂದ ಅಪ್ಪ ಇದ್ದಾರಲ್ಲ ಅದು ನನ್ನ ಅದೃಷ್ಟ ಎನ್ನುತ್ತಾರೆ. (ಮೇಲಿನ ಉತ್ತರ ಉತ್ತಮ ಪುರುಷದಲ್ಲಿದ್ದರೂ ಅಂಕಗಳನ್ನು ನೀಡುವುದು)

[ಆ] ತ್ರಿಭಾಷಾ ಸೂತ್ರದ ಬಳಕೆ ಹೇಗಿರಬೇಕು?

ಕೇಂದ್ರ ಸರ್ಕಾರದ ಕಚೇರಿಗಳ ಎಲ್ಲಾ ಸೂಚನೆಗಳು, ಎಲ್ಲಾ ಫಾರಂಗಳು, ಎಲ್ಲಾ ಬರವಣಿಗೆಯ ವ್ಯವಹಾರಗಳು ಕ್ರಮವಾಗಿ ಪ್ರಾದೇಶಿಕ ಭಾಷೆ ಹಿಂದಿ ಮತ್ತು ಇಂಗ್ಲೀಷ್‌ಗಳಲ್ಲಿರಬೇಕು. ಇದೇ ತ್ರಿಭಾಷಾ ಸೂತ್ರದ ಬಳಕೆ.

[ಇ] ಮನೋರಮೆ ಕಥೆ ಹೇಳೆಂದು ಕೇಳಲು ಕಾರಣವೇನು?

ಹಗಲಿರುಳು ಒಂದೇ ಸಮನೆ ಸುರಿಯುತ್ತಿರುವ ಈ ಜಡಿಮಳೆಯಿಂದಾಗಿ ಹಗಲು ಬಹಳ ದೀರ್ಘವಾಗಿ ಕಾಣಿಸುತ್ತಿದೆ, ಮನಸ್ಸಿಗೆ ಬೇಸರವಾಗಿದೆ, ಆದ್ದರಿಂದ ಯಾವುದಾದರೂ ನಲ್ಗತೆಯನ್ನು ಹೇಳು ಎಂದು ಕೇಳಿದಳು.

**13.** ಸಂದರ್ಭ, ಸ್ವಾರಸ್ಯ : [ಒಂದಕ್ಕೆ] –>3*1=3

[ಅ] "ಬಾಯಿಚಪಲ ತಣಿಸುವ ಅಕ್ಷಯಪಾತ್ರೆ?"

**ಆಯ್ಕೆ:** ವೀರೇಂದ್ರ ಸಿಂಪಿಯವರ 'ಹಳ್ಳಿಯ ಚಹಾದ ಹೊಟೇಲುಗಳು' ಎಂಬ ಗದ್ಯಪಾಠ.

ಸಂದರ್ಭ: ಬಾಯಿಚಪಲ ತೀರಿಸಿಕೊಳ್ಳಲು ಹಳ್ಳಿಯ ಹೊಟೇಲಿಗೆ ಬರುವ ಜನರನ್ನು ಕುರಿತು ಹೇಳಿದ ಮಾತಿದು.

**ವಿವರಣೆ/ಸ್ವಾರಸ್ಯ:** ಹಳ್ಳಿಯ ಚಹಾದಂಗಡಿಗೆ ವೃದ್ಧರಾದಿಯಾಗಿ ಎಲ್ಲ ವಯೋಮಾನದವರು ಭೆಟ್ಟಿ ಕೊಡುತ್ತಾರೆ. ಮನೆಯಲ್ಲಿ ಹಲ್ಲು ಬಾಯಿ ತೊಳೆದುಕೊಳ್ಳದೆ ಹೊಟೇಲಿಗೆ ಬಂದು ಒಂದು ಗ್ಲಾಸ್ ನೀರನ್ನು ತೆಗೆದುಕೊಂಡು ಬಾಯಿ ಮುಖ ತೊಳೆದುಕೊಂಡು ಚಹಾ ಕುಡಿಯುವವರು. ಹೊಲಕ್ಕೆ ಹೊರಟ ರೈತ, ರೈತನ ಎತ್ತುಗಳು ಚಹಾದಂಗಡಿ ಬಂದೊಡನೆ ಗಕ್ಕನೇ ನಿಂತುಬಿಡುತ್ತವೆ. ಈ ರೈತ ಹೊಟೇಲ್ ಒಳಗೆ ಹೋದರೆ ಎತ್ತುಗಳನ್ನೇ ಮರೆಯುತ್ತಾನೆ. ಮನೆಯಲ್ಲಿ ಪೂಜಾ ಶಾಸ್ತ್ರವನ್ನು ಬೇಗನೆ ಮುಗಿಸಿ ಧಾವಿಸಿ ಬರುವ ನಿಷ್ಠಾವಂತರು ತಿನ್ನುವುದನ್ನೇ ಧ್ಯೇಯವನ್ನಾಗೆ ಮಾಡಿಕೊಂಡವರು. ಹೆಂಡತಿ ಮಕ್ಕಳು ಸತ್ತರೆ ಸಾಯಲಿ ಎಂದು ತಮ್ಮ ದುಡಿಮೆಯ ಹಣದ ಬಹುಭಾಗವನ್ನು ಚಹಾದಂಗಡಿಗೆ ಸುರಿಯುತ್ತಾರೆ. ವೃದ್ಧರಿಗೆ, ಪೆನಶ್ಯನ್‌ದಾರರಿಗೆ ಬಾಯಿ ಚಪಲ ಹೆಚ್ಚು. ಮನೆಯಲ್ಲಿ ವ್ಯವಸ್ಥೆ ಇರುವುದಿಲ್ಲ. ಮಗ-ಸೊಸೆಯರದೆ ದರ್ಬಾರು ಎನ್ನುತ್ತ ಹೊಟೇಲಿನ ಆಜೀವ ಸದಸ್ಯರಾಗುತ್ತಾರೆ. ರೋಗಿಗಳು ಮನೆಯಲ್ಲಿ ಪಥ್ಯೆ ಮಾಡಿ ಅಂಗಡಿಗೆ ಬಂದು ಸತ್ತರೆ ಸಾಯಲಿ ಎಂದು ಕರಿದ ಪದಾರ್ಥ ತಿಂದು ಬಾಯಿ ಚಪಲ ತೀರಿಸಿಕೊಳ್ಳುತ್ತಾರೆ

[ಆ] "ದುರಂತದ ಮೂಲ ಬೀಜಗಳು ಚಹಾ ಗಿಡದ ರೂಪದಲ್ಲಿ ಬಂದವು."

**ಆಯ್ಕೆ:** ಕೃಪಾಕರ ಸೇನಾನಿ, ಕೆ. ಪುಟ್ಟಸ್ವಾಮಿಯವರು ಬರೆದಿರುವ "ವಾಲ್‌ಪರೈ : ಅಭಿವೃದ್ಧಿ ತಂದ ದುರಂತ" ಎಂಬ ಲೇಖನ.

ಸಂದರ್ಭ: ವಾಲ್‌ಪರೈ ಅರಣ್ಯಕ್ಕೆ ಕಾರ್ವರ್ ಮಾರ್ಷ್ ಪ್ರವೇಶಿಸಿ ಚಹಾಗಿಡಗಳನ್ನು ನೆಟ್ಟ ಪರಿಣಾಮದ ಕುರಿತು ಹೇಳುವಾಗ ಈ ಮಾತು ಬಂದಿದೆ.

**ವಿವರಣೆ/ಸ್ವಾರಸ್ಯ:** ವಾಲ್‌ಪರೈ ಕಗ್ಗತ್ತಲ ಅರಣ್ಯಕ್ಕೆ ಮೊದಲ ಬಾರಿಗೆ ಬ್ರಿಟಿಷಿಗ ಕಾರ್ವರ್ ಮಾರ್ಷ್ ಪ್ರವೇಶಿಸಿದ. ಅಲ್ಲಿ ಆತನಿಗೆ ಪೂಣಚ್ಚಿ ಎಂಬ ಆದಿವಾಸಿ ಪರಿಚಯವಾದನು. ಅವನ ನೆರವಿನಿಂದ ಇಡೀ ಅರಣ್ಯವನ್ನೆಲ್ಲ ಮಾರ್ಷ್ ಅನ್ವೇಷಿಸಿದ. ಪ್ರಕೃತಿಯನ್ನು ಆಸ್ವಾದಿಸುತ್ತಾ ತಾನು ಇಲ್ಲಿಯೇ ನೆಲೆಸಬೇಕೆಂದು ತೀರ್ಮಾನಿಸಿದ. ಪೂಣಚ್ಚಿಯ ಸಹಕಾರದಿಂದ ಸ್ಥಳೀಯರ ವಿಶ್ವಾಸ ಸಂಪಾದಿಸಿ ಇಡೀ ಪ್ರದೇಶದ ನಕ್ಷೆ ತಯಾರಿಸಿ ಅಲ್ಲಿ ಆಗಷ್ಟೇ ಭಾರತ ಪ್ರವೇಶಮಾಡಿದ್ದ ಚಹಾ ಗಿಡಗಳನ್ನು ತಂದು ನೆಟ್ಟ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬರುತ್ತದೆ.

**14. ಐದಾರು ವಾಕ್ಯಗಳ ಉತ್ತರಗಳು : [ಒಂದಕ್ಕೆ] –>4*1=4**

**[ಅ] ಬಸಲಿಂಗ ಎದುರಿಸುತ್ತಿದ್ದ ಸಮಸ್ಯೆಗಳು ಯಾವುವು?**

ಬಸಲಿಂಗನ ಸಮಸ್ಯೆಗಳಲ್ಲಿ ಮೊದಲನೆಯದು ಆತನ ಸೋಮಾರಿಗಳಾದ ಎರಡು ಎತ್ತುಗಳು. ಒಂದಕ್ಕಿಂತ ಇನ್ನೊಂದು ದುಡಿಮೆಯಲ್ಲಿ ಹಿಂದಿತ್ತು. ಒಂದು ನೊಗ ಇಟ್ಟೊಡನೆ ಮಲಗಿ ಬಿಡುತ್ತದೆ. ಎಷ್ಟು ಹೊಡೆದರೂ ಏಳುವುದಿಲ್ಲ. ಇನ್ನೊಂದು ಕೂಡ ತನ್ನ ಸಹೋದ್ಯೋಗಿಯಂತೆಯೇ ಆಗಿ ಬಿಡುವ ಸೂಚನೆಗಳಿವೆ. ಮಲಗಿರುವ ಒಂದು ಎತ್ತು ಒಂದು ಏಟು ಕೊಟ್ಟೊಡನೆ ಏಳುತ್ತದೆ. ಇನ್ನೊಂದು ಜೊತೆಗಾರ ಏಳುವುದನ್ನೇ ಕಾದು ಕೆಲಸವಿಲ್ಲದ ಬಗ್ಗೆ ಖುಷಿಗೊಳ್ಳುವಂತೆ ಕಂಡುಬರುತ್ತದೆ. ಇದರಿಂದ ಬೇಸರಗೊಂಡ ಬಸಲಿಂಗ ಈ ಎರಡೂ ಎತ್ತುಗಳನ್ನು ಯಾರಾದರೊಬ್ಬರಿಗೆ ಸಾಟಿಯಲ್ಲಿ ಕೊಟ್ಟು ಹೊಸ ಎತ್ತುಗಳನ್ನು ಹೊಂಚಿಕೊಳ್ಳುವ ಯೋಚನೆ ಮಾಡುತ್ತಿದ್ದ. ಆದರೆ ಈ ಎರಡು ಎತ್ತುಗಳನ್ನು ಮಾರುವುದು ಆತನಿಗೆ ಒಂದು ಸವಾಲಾಗಿತ್ತು. ಯಾಕೆಂದರೆ ಈ ಎತ್ತುಗಳ ಬಗ್ಗೆ ಒಳ್ಳೆಯದನ್ನು ಹೇಳಲು ಲೆಕ್ಕ ಹಾಕಿದಂತೆಲ್ಲ ಅವನ ತಲೆ ಬಿಸಿಯಾಗುತ್ತಿತ್ತು. ಅವನು ಎದುರಿಸುತ್ತಿದ್ದ ಎರಡನೇ ಸಮಸ್ಯೆಯೆಂದರೆ, ಅವನ ಮಗುವಿಗೆ ಮೈಯಲ್ಲಿ ಸರಿಯಿಲ್ಲ. ಶಿವನೂರು ಸ್ವಾಮಿಗಳಿಗೆ ತೋರಿಸಬೇಕೆಂದು ಹೆಂಡತಿ ಸಿದ್ಲಿಂಗಿ ಹೇಳುತ್ತಲೇ ಇದ್ದಾಳೆ. ಸ್ವಲ್ಪ ನಿರ್ಲಕ್ಷ್ಯ ತೋರಿದರೂ ಅವನ ಮಗು ಅವನಿಂದ ದೂರವಾಗುವ ಸಂಭವವಿತ್ತು. ಮೂರನೆಯ ಮತ್ತು ಮುಖ್ಯವಾದ ಸಮಸ್ಯೆಯೆಂದರೆ ಬಸಲಿಂಗನ ಎಡಗಣ್ಣಿನಲ್ಲಿ ಕಾಣಿಸಿಕೊಂಡ ನೋವು. ಇದು ದಿನದಿಂದ ದಿನಕ್ಕೆ ವ್ಯಾಪಿಸಿ ಕುಗ್ಗುವಂತೆ ಮಾಡಿತು. ಈ ಎಲ್ಲಾ ಸಮಸ್ಯೆಗಳು ಮೇಲಿಂದ ಮೇಲೆ ಬಸಲಿಂಗನನ್ನು ಕಾಡುತ್ತಿದ್ದವು

**[ಆ] ಕಲಾಂ ಅವರು ಯಾವಾಗಲೂ ಸಾಧ್ಯತೆಗಳನ್ನು ಅರಸುವ ಆಶಾಜೀವಿ ಹೇಗೆ? ವಿವರಿಸಿರಿ.**

ರಾಷ್ಟ್ರಪತಿಯಾಗಿ ಆಯ್ಕೆಗೊಳ್ಳುವುದಕ್ಕೆ ಕೆಲವೇ ದಿನಗಳ ಹಿಂದೆ ಅವರು ಹೈದರಾಬಾದಿನ ಒಂದು ಆಸ್ಪತ್ರೆಗೆ ಭೇಟಿ ಕೊಟ್ಟಿದ್ದರು. ಬುದ್ಧಿಮಾಂದ್ಯ ಮಕ್ಕಳ ಮೆದುಳಿನಲ್ಲಿ 'ಚಿಪ್' ಅಳವಡಿಸಿ ಗುಣಪಡಿಸಲು ಸಾಧ್ಯವೇ ಎಂದು ಪಶ್ನಿಸಿದರು. ಅಗತ್ಯ ಮಾಹಿತಿಗಳನ್ನು ಕ್ರೋಢೀಕರಿಸಿರುವ ಸೂಕ್ಷ್ಮ ಎಲೆಕ್ಟ್ರಾನಿಕ್ ಸಾಧನವೇ ಚಿಪ್. ಕಂಪ್ಯೂಟರ್ ಸಹಾಯದಿಂದ ಮಿದುಳಿನಲ್ಲಿ ಇದನ್ನು ಅಳವಡಿಸಿ ಬುದ್ಧಿಮಾಂದ್ಯತೆ ನಿವಾರಿಸಬಹುದೆ ಎಂದು ಕಲಾಂ ಪ್ರಶ್ನಿಸಿದರು. ವೈದ್ಯರು ಸಾಧ್ಯತೆಯ ಬಗ್ಗೆ ಅನುಮಾನ ವ್ಯಕ್ತಪಡಿಸಿದಾಗ ಕಲಾಂ ಹೇಳಿದರು, "ಇದು ಸಾಧ್ಯವಿಲ್ಲ ಎಂದು ಹೇಳುವ ನೂರು ಕಾರಣಗಳ ಬಗ್ಗೆ ನನಗೆ ಸ್ವಲ್ಪವೂ ಆಸಕ್ತಿ ಇಲ್ಲ. ಅದು ಹೇಗೆ ಸಾಧ್ಯವಾಗುತ್ತದೆ ಎಂಬ ಒಂದು ಕಾರಣ ಹೇಳಬಲ್ಲಿರಾ?" ಈ ಘಟನೆಯ ಮೂಲಕ ನಾವು ಕಲಾಂ ಅವರು ಯಾವಾಗಲೂ ಸಾಧ್ಯತೆಗಳನ್ನು ಅರಸುವ ಆಶಾಜೀವಿ. ಎಂದು ತಿಳಿಯಬಹುದು.

## ಪದ್ಯಭಾಗ

**15. ಒಂದು ವಾಕ್ಯದ ಉತ್ತರಗಳು : (ನಾಲ್ಕಕ್ಕೆ) ->1*4=4**

**[ಅ] ರಾವಣನ ಎದುರು ಪ್ರತ್ಯಕ್ಷವಾದ ವಿದ್ಯಾದೇವತೆ ಯಾರು?**

**ಬಹುರೂಪಿಣೀ ಎಂಬ ವಿದ್ಯಾದೇವತೆ.**

**[ಆ] ಗರತಿಯು ಹಾಲುಂಡ ತವರಿಗೆ ಏನೆಂದು ಹರಸುತ್ತಾಳೆ?**

**ತವರಿನ ರಸಬಳ್ಳಿ ಹೊಳೆದಂಡೆಯ ಕರಕೀಯ ಕುಡಿಯ ಹಾಗೆ ಹಬ್ಬಲಿ ಎಂದು ಗರತಿಯು ಹಾಲುಂಡ ತವರನ್ನು ಹರಸುತ್ತಾಳೆ.**

**[ಇ] ಏನು ಬಂದೇ ಬರುತ್ತದೆ ಎಂಬ ನಂಬಿಕೆಯಲ್ಲಿ ಯೇಸು ಶಿಲುಬೆಗೇರಿದ್ದಾನೆ?**

**ದೈವೀರಾಜ್ಯ ಬಂದೇ ತೀರುತ್ತದೆ ಎಂಬ ನಂಬಿಕೆಯಲ್ಲಿ ಜೀಸಸ್ ಶಿಲುಬೆಗೇರಿದ್ದಾನೆ.**

**[ಈ] ಲಕ್ಷದಾರಿಗಳ ಚದುರಂಗದಾಟ ಯಾವುದು?**

**ಮುಂಬೈನಂತಹ ನಗರಜೀವನ ಲಕ್ಷದಾರಿಗಳ ಚದುರಂಗದಾಟ.**

**[ಉ] ಗುರು ಹೇಗೆ ವರ್ತಿಸಬಾರದು?**

**ಗುರು ಲಘುವಾಗಿ ವರ್ತಿಸಬಾರದು.**

**16. ಎರಡು–ಮೂರು ವಾಕ್ಯಗಳ ಉತ್ತರಗಳು [ಎರಡಕ್ಕೆ] –> 2*2=4**

**[ಅ] ದುರ್ಜನರ ಕಾರ್ಯ ಯಾವ ಬಗೆಯದೆಂದು ಪುರಂದರದಾಸರು ಅಭಿಪ್ರಾಯಪಡುತ್ತಾರೆ?**

ದುರ್ಜನರು ಸದಾಕಾಲ ಒಯ್ಯಾರದ ಮಾತುಗಳನ್ನು ಆಡುತ್ತಿರುತ್ತಾರೆ. ಆದರೆ ಅವರಿಂದ ಸ್ವಲ್ಪ ಮಟ್ಟಿನ ಉಪಕಾರವನ್ನೂ ನಿರೀಕ್ಷಿಸಲು ಸಾಧ್ಯವಿಲ್ಲ. ದುರ್ಜನರು ಯಾವಾಗಲೂ ಅನ್ನ ತಿನ್ನಲು ಕಚ್ಚಾಡುವ ನಾಯಿಗಳಂತೆ ತಮ್ಮ ಕಾರ್ಯ ಸಾಧಿಸಿಕೊಳ್ಳಲು ಹೋರಾಡುತ್ತಿರುತ್ತಾರೆ.

**[ಆ] ಕವಿಯ ಪ್ರಕಾರ ಮುಪ್ಪು ಮತ್ತು ಹರೆಯದ ನಡುವಿನ ವ್ಯತ್ಯಾಸವೇನು?**

ಕವಿಯ ಪ್ರಕಾರ ಹರೆಯ(ಯೌವನ)ಜೀವನದ ಬೆಳಗುಜಾವ. ಹರೆಯದ ಕಾಲದಲ್ಲಿ ಸಮಯವನ್ನು ವ್ಯರ್ಥವಾಗಿ ಕಳೆಯದೆ, ಕಾರ್ಯಶೀಲರಾಗಿ ಜೀವನವನ್ನು ಸವಿಯಾಗಿಸಿಕೊಳ್ಳಬೇಕು. ಮುಪ್ಪುಜೀವನದ ಸಂಧ್ಯಾಕಾಲ ಜೊತೆಗೆ ನಾನಾ ರೀತಿಯ ಚಿಂತೆಗಳು ಮನಸ್ಸಿನಲ್ಲಿ ಮೂಡಿ ಮನಸ್ಸು ಘಾಸಿಗೊಳ್ಳುವ ಕಾಲ ಎಂದು ಕವಿ ಹರೆಯ ಮತ್ತು ಮುಪ್ಪಿನ ವ್ಯತ್ಯಾಸವನ್ನು ಹೇಳುತ್ತಾರೆ.

**[ಇ] ಎಣ್ಣೆ ತೀರಿದ ದೀಪಗಳು ಏನನ್ನು ಸೂಚಿಸುತ್ತವೆ?**

ಎಣ್ಣೆ ತೀರಿದ ದೀಪಗಳು ಆಯಸ್ಸು ಮುಗಿದ ಜೀವದ ಶರೀರವನ್ನು ಸೂಚಿಸುತ್ತವೆ. ಆದರೆ ಕವಿಯ ಪ್ರಕಾರ ಎಣ್ಣೆ ತೀರಿರುವ ದೀಪಗಳಿಗೆ ಬತ್ತಿ ಹೊಸೆಯುವ ಕೆಲಸ ವ್ಯರ್ಥವೇನಲ್ಲ. ಏಕೆಂದರೆ ಮತ್ತೆ ಬತ್ತಿ ಹೊಸೆದು ದೀಪ ಬೆಳಗುವ ಸಾಧ್ಯತೆ ಇದ್ದೇ ಇರುತ್ತದೆ. ಹತ್ತಿ ಬತ್ತಿಯಾಗಿ, ಬೆಳಕಿನ ಬಿತ್ತವಾಗಿ, ತೈಲವಾಗಿ ಉರಿದು ಇಲ್ಲವಾದಾಗ ಮಾತ್ರ ಆತ್ಮಪರಿನಿರ್ವಾಣ ಅಥವಾ ಮೋಕ್ಷ

**17.** ಸಂದರ್ಭ, ಸ್ವಾರಸ್ಯ : [ಒಂದಕ್ಕೆ] –>**3*1=3**

[ಅ] "ಒಬ್ಬಳನಾಳಲಾರಿರಿ ಗಂಡರೋ ನೀವ್ ಭಂಡರೋ?"

ಆಯ್ಕೆ: ಕುಮಾರವ್ಯಾಸನು ರಚಿಸಿರುವ 'ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು' ಎಂಬ ಪದ್ಯಭಾಗ.

ಸಂದರ್ಭ : ಈ ಮಾತನ್ನು ದ್ರೌಪದಿಯು ಭೀಮನಲ್ಲಿ ಹೇಳುತ್ತಾಳೆ.

ವಿವರಣೆ/ಸ್ವಾರಸ್ಯ: ಸಮಾಜ ವ್ಯವಸ್ಥೆಯಲ್ಲಿ ಒಬ್ಬಳು ಹೆಣ್ಣಿಗೆ ಒಬ್ಬ ಗಂಡನಿರುತ್ತಾನೆ. ಒಬ್ಬನೇ ಗಂಡನಾದರೂ ಆತ ತನ್ನ ಹೆಂಡತಿಯ ಮಾನವನ್ನು ಸಂರಕ್ಷಿಸಿಕೊಳ್ಳಲು ಪ್ರಾಣವನ್ನು ಕೊಡುವುದಕ್ಕೂ ಸಿದ್ಧನಿರುತ್ತಾನೆ. ಆದರೆ ದ್ರೌಪದಿಗೆ ಐವರು ಗಂಡಂದಿರಿದ್ದರೂ ಒಬ್ಬರೂ ಆಕೆಯ ಮಾನವನ್ನು ಕಾಯುವುದಕ್ಕೆ ಮುಂದಾಗುತ್ತಿಲ್ಲ ಎಂಬುದಾಗಿ ದ್ರೌಪದಿ ಆರೋಪಿಸುತ್ತಾಳೆ. ತಟಸ್ಥನಾಗಿದ್ದ ಭೀಮನನ್ನು ಕಾರ್ಯೋನ್ಮುಖನನ್ನಾಗಿ ಮಾಡಲು ದ್ರೌಪದಿ ಛೇಡಿಸುವ ಮಾತಿದಾಗಿದೆ.

[ಆ] "ಮಾತೇ ಮರೆತು ಹೋಗಿದೆ ಕಣೆ"

ಆಯ್ಕೆ : ಶ್ರೀಮತಿ ಲಲಿತಾ ಸಿದ್ಧಬಸವಯ್ಯ ಅವರು ಬರೆದ 'ಒಂದು ಹೂ ಹೆಚ್ಚಿಗೆ ಇಡುತೀನಿ' ಎನ್ನುವ ಪದ್ಯ.

ಸಂದರ್ಭ: ಮುದುಕ ದೂರದ ಅಸ್ಸಾಂನಲ್ಲಿ ಅನುಭವಿಸುತ್ತಿರುವ ಪಾಡನ್ನು ಹೇಳುವ ಸಂದರ್ಭವಿದು.

ವಿವರಣೆ/ಸ್ವಾರಸ್ಯ: ಮುದುಕನಿರುವುದು ದೂರದ ಅಸ್ಸಾಂಮಿನಲ್ಲಿ. ಮುದುಕನಿಗೆ ಅಲ್ಲಿನ ಭಾಷೆ ಬರುವುದಿಲ್ಲ. ಕಿರಿಯ ಮಗ ಮತ್ತವನ ಹೆಂಡತಿ ಬೆಳಿಗ್ಗೆ ಒಂಭತ್ತಕ್ಕೆ ಕೆಲಸಕ್ಕೆ ಹೋದರೆ ಬರುವುದು ಹೊತ್ತು ಕಳೆದ ಮೇಲೆ. ಹಾಗಾಗಿ ಅಸ್ಸಾಮಿ ಭಾಷೆ ಬರದ ಅವನಿಗೆ ಮಾತನಾಡಲು ಯಾರು ಇಲ್ಲ. ಮುದುಕಿ ಫೋನು ಮಾಡಿದಾಗಲೆಲ್ಲ ಮಾತೇ ಮರೆತು ಹೋಗಿದೆ ಕಣೆ. ಮಾತಾಡು ಮಾತಾಡು ಮಾತಾಡುತ್ತಿರು ಮಾತು ನಿಲ್ಲಿಸಬೇಡ ಎಂದು ಗೋಗರೆಯುತ್ತಾನೆ. ಆತ ಫೋನು ಗೂಡನ್ನೇ ತಬ್ಬಿಕೊಳ್ಳುವುದರ ಮೂಲಕ ತನ್ನ ಬೇಸರವನ್ನು ವ್ಯಕ್ತಪಡಿಸುತ್ತಿದ್ದಾನೆ.

**18.** ಐದಾರು ವಾಕ್ಯಗಳ ಉತ್ತರಗಳು [ಒಂದಕ್ಕೆ] –> **4*1=4**

[ಅ] ನಿರ್ಮಲಚಿತ್ತದ ಅಗತ್ಯವನ್ನು ಸೋಮನಾಥ ಹೇಗೆ ನಿರೂಪಿಸಿದ್ದಾನೆ?

ಕವಿ ಪುಲಿಗೆರೆ ಸೋಮನಾಥನು 'ಪಗೆಯಂ ಬಾಲಕನೆಂಬರೇ' ಪದ್ಯಭಾಗದಲ್ಲಿ ನಿರ್ಮಲವಾದ ಮನಸ್ಸನ್ನು ಹೊಂದಿರುವಾತನೇ ನಿಜವಾದ ಮಡಿವಂತನಾಗಿದ್ದಾನೆ. ಹೊಟ್ಟೆಯಲ್ಲಿ ಕೆಸರನ್ನು ತುಂಬಿಕೊಂಡು ಮೇಲೆ ತೊಳೆದರೆ ಶುದ್ಧನಾಗಲು ಸಾಧ್ಯವೇ? ಕಡುಪಾಪ ಮಾಡಿ ಬಲುವಾಗಿ ಪುಣ್ಯ ತೀರ್ಥಗಳಲ್ಲಿ ಸ್ನಾನ ಮಾಡಿದರೆ ಶುಚಿಯಾಗುತ್ತಾನೆಯೇ ಹಾಗೆ ನೋಡಿದರೆ ಕಾಗೆಯೂ ಕೂಡ ಸ್ನಾನ ಮಾಡುತ್ತದೆ. ಬೆಲ್ಲದ ಪಾನಕದೊಳಗೆ ಬೇವಿನ ಫಲವನ್ನು ಅದ್ದಿಟ್ಟರೆ ಬೇವಿನ ಫಲ ಕಹಿ ಗುಣ ಬಿಡುವುದಿಲ್ಲ. ಸ್ವಾದವಾಗುವುದಿಲ್ಲ. ಮನಸ್ಸಿನ ನೈರ್ಮಲ್ಯ ಕಾಪಾಡಿಕೊಳ್ಳುವುದೇ ನಿಜವಾದ ಮಡಿ. ಇದೇ ರೀತಿ ಮನಸ್ಸಿನಲ್ಲಿ ಕೆಟ್ಟ ವಿಚಾರಗಳನ್ನು ಇಟ್ಟುಕೊಂಡು ಮೇಲ್ನೋಟಕ್ಕೆ ಎಷ್ಟು ಸ್ವಚ್ಛವಾಗಿ ಕಾಣಿಸಿದರೂ ಆತ ಶುಚಿಯಲ್ಲ.ಶುಭ್ರವಾದ ಒಳ್ಳೆಯ ಮನಸ್ಸನ್ನು ಹೊಂದಿರುವವನೇ ನಿಜವಾದ ಮಡಿವಂತನು. ನಿರ್ಮಲ ಮನಸ್ಸೇ ನಿಜವಾದ ಮಡಿ ಎನ್ನುವುದರ ಮೂಲಕ ನಿರ್ಮಲಚಿತ್ತದ ಅಗತ್ಯವನ್ನು ಸೋಮನಾಥ ಹೀಗೆ ನಿರೂಪಿಸಿದ್ದಾನೆ.

[ಆ] 'ಒಮ್ಮೆ ನಗುತ್ತೇವೆ' ಎಂಬ ಕವಿತೆಯಲ್ಲಿ ವ್ಯಕ್ತವಾಗುವ ನಗುವಿನ ವೈಶಿಷ್ಟ್ಯ ವಿವರಿಸಿರಿ.

ನಮ್ಮದು ಸಮೃದ್ಧದೇಶವಾದರೂ ಸಮಾನತೆಗಾಗಿ ಸಮೃದ್ಧತೆಯ ಬದುಕಿಗಾಗಿ ನಿರಂತರ ಹೋರಾಟ ನಡೆದೇ ಇದೆ. ಶ್ರೀಮತಿ ಸುಕನ್ಯಾ ಮಾರುತಿ ಅವರು ಬರೆದಿರುವ ಒಮ್ಮೆ ನಗುತ್ತೇವೆ ಎಂಬ ಕವಿತೆಯು ವ್ಯವಸ್ಥೆಯು ವ್ಯವಸ್ಥೆಯ ವಿರುದ್ಧಎತ್ತಿರುವ ಬಂಡಾಯದ ಧ್ವನಿಯಾಗಿದೆ. ಸಾಮಾಜಿಕ ಅಸಮಾನತೆಯು ಬಡವರನ್ನು ಹಸಿವಿನ ಸುಳಿಯಲ್ಲಿ ಸಿಲುಕಿಸಿ ನರಳಿಸುತ್ತಿದೆ. ಶತಶತಮಾನಗಳಿಂದ ಶೋಷಣೆಗೆ ಒಳಗಾದ ಜನ ಸಮಪಾಲು – ಸಮಬಾಳು ಪಡೆಯಲು ಅವಿರತ ಪ್ರಯತ್ನದಲ್ಲಿದ್ದಾರೆ.

ಆದರೂ 'ಇಲ್ಲಿ ಎಲ್ಲ ಇದ್ದರೂ ಯಾರಿಗುಂಟು ಯಾರಿಗಿಲ್ಲ'ಎನ್ನುವ ವಾತಾವರಣ ಇದೆ. ಇಲ್ಲಿನ ನಗು ವಿಶಿಷ್ಟವಾದುದು. ವ್ಯಕ್ತಿಯ ಹಿತಕ್ಕಿಂತ ಸಮಷ್ಟಿಯ ಹಿತವನ್ನು ಬಯಸುತ್ತದೆ. ದನಗಳಿಗೆ ಮೇವು ಇಲ್ಲದೇ ಸಾಯುತ್ತಿವೆ. ಜನರಿಗೆ ಕುಡಿಯಲು ನೀರು ಸಿಗುತ್ತಿಲ್ಲ. ತಿನ್ನಲು ಗಂಜಿಯೂ ಇಲ್ಲದಂತಾಗಿದೆ. ನನ್ನವರು ಹಸಿವಿನಿಂದ ನರಳುತಿದ್ದಾರೆ. ಸತ್ತ ದನಗಳನ್ನು ತಿನ್ನುತ್ತಿದ್ದಾರೆ. ಇಂತವರಲ್ಲಿ ನಗು ಎಲ್ಲಿಂದ ಬರುತ್ತದೆ. ಸಾಮಾಜಿಕ ಅಸಮಾನತೆಯು ಬಡವರನ್ನು ಹಸಿವಿನ ಸುಳಿಯಲ್ಲಿ ಸಿಲುಕಿಸಿ ನರಳಿಸುತ್ತಿದೆ. ಅವರ ಮೊಗದಲ್ಲಿ ನಗು ಅರಳಬೇಕಾದರೆ ಸಾಮಾಜಿಕ ಅಸಮಾನತೆಯು ದೂರಾಗಿ ಸಮಾನತೆ ಬರಬೇಕು. ಅವರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ಆ ಮೂಲಕ ಹೊಗೆಯಾಗಿರುವ ಅವರ ಬದುಕಿನಲ್ಲಿ ನಗೆ ಮೂಡಿಸಬೇಕು ಎಂಬ ಕಳಕಳಿ ಇಲ್ಲಿದೆ. ನನ್ನವರನ್ನು ಕಷ್ಟದಿಂದ, ಹಸಿವಿನಿಂದ ಪಾರುಮಾಡಿ ಅವರನ್ನು ನಗಿಸುತ್ತೇನೆ. ಆಗ ಮಾತ್ರ ನಾನು ನಗುತ್ತೇನೆ ಎಂದ ಕವಯಿತ್ರಿ ತಾನು ನಗುವ ನಗು ಕೊನೆಯಿಲ್ಲದ್ದು, ಮೊನೆಯಿಲ್ಲದ್ದು ಎಂದಿದ್ದಾರೆ. ಆಕಾಶದಲ್ಲಿ ಕಾರ್ಮೋಡ ಕವಿಸುವ ನಗು, ಮಳೆ ಸುರಿಸುವ ನಗು, ಹೊಳೆ ಹರಿಸುವ ನಗು, ಬೆಳೆ ಬೆಳೆಸುವ ನಗು, ದನಜನ ಎಲ್ಲ ಕೂಡಿ ನಗುತ್ತೇವೆ. ಒಮ್ಮೆಯಾದರೂ ನಕ್ಕೇ ನಗುತ್ತೇವೆ ಎಂದಿದ್ದಾರೆ.

## (ನಾಟಕ) ದೀರ್ಘ ಗದ್ಯ

**19.** ಒಂದು ವಾಕ್ಯದ ಉತ್ತರಗಳು: [ಮೂರಕ್ಕೆ] –>1*3=3

[ಅ] ಆನೆ ರೆಹಮಾನ್‌ನ ಅಂಗಡಿಯನ್ನು ಬೀಳಿಸಿತು.

[ಆ] ನಿರೂಪಕರಿಗೆ ತರ್ಲೆ ಕೇಸುಗಳ ಕ್ಷುದ್ರ ಸಂಗತಿಗಳ ಜಾಡು ಹಿಡಿಯುವ ಕೆಟ್ಟ ಕುತೂಹಲ.

[ಇ] ರಮೇಶ್‌ಬಾಬು ಟೆಲಿಫೋನ್ ಇಲಾಖೆಯ ಇಂಜನೀಯರ್.

[ಈ] ಆನೆ ಕಾಡಿನಿಂದ ಹಿಂದಿರುಗಿದರೆ ಏನು ಮಾಡುವುದು? ಎಂಬುದು ಕೃಷ್ಣೇಗೌಡರನ್ನು ಕಾಡಿದ ಕಳವಳ.

**20.** ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ [ಒಂದಕ್ಕೆ] –> 2*1=2

[ಅ] ಮಠದವರಿಗೆ ಆನೆಗಿಂತ ವೇಲಾಯುಧನನ್ನು ಸಾಕಲು ತ್ರಾಸವಾದುದೇಕೆ?

ಇಪ್ಪತ್ತನಾಲ್ಕು ಗಂಟೆಯೂ ಕುಡಿದೇ ಇರುತ್ತಿದ್ದ ವೇಲಾಯುಧ ಮಠದ ಸಾತ್ವಿಕ ವಾತಾವರಣಕ್ಕೆ ದೊಡ್ಡ ತಲೆನೋವಾಗಿದ್ದ. ಆನೆ ಇರುವವರೆಗೆ ತನ್ನ ಅನಿವಾರ್ಯತೆಯನ್ನು ಅರಿತ ಅವನು ಮಠಕ್ಕೆ ಕಿರುಕುಳ ಕೊಡಲಾರಂಭಿಸಿದ್ದರಿಂದ ಮಠದವರಿಗೆ ಆನೆಗಿಂತಲೂ ಅದರ ಮಾವುತನನ್ನು ಸಾಕುವುದು ಹೆಚ್ಚು ತ್ರಾಸದಾಯಕವಾಗಿತ್ತು.

[ಆ] ತನ್ನ ಕೆಲಸ ಅತ್ಯಂತ ಅಪಾಯಕಾರಿಯೆಂದು ದುರ್ಗಪ್ಪ ವಿವರಿಸಿದ್ದು ಹೇಗೆ?

ಲೈನ್‌ಮನ್ ಕೆಲಸಕ್ಕೆ ಸೇರಿದ ಮೇಲೆ ಪ್ರಾಣದ ಆಸೆ ಇಟ್ಕೊಂಡ್ರೆ ಆಗುತ್ತ? ನಮ್ಮ ಡಿಪಾರ್ಟ್‌ಮೆಂಟಿನ ಲೈನ್‌ಮನ್‌ಗಳ್ಯಾರದ್ರೂ ಈ ವರೆಗೆ ಸರ್ವಿಸ್ ಮುಗಿಸಿ ರಿಟೈರಾಗಿರೋದನ್ನ ನೋಡಿದ್ದೀರಾ? ಕರೆಂಟಿನ ಜೊತೆ ಕೆಲಸ ಅದು. ಒಂದಲ್ಲ ಒಂದು ದಿನ ಸ್ವಲ್ಪ ಎಚ್ಚರ ತಪ್ಪಿದರೂ ಅಲ್ಲಿಗೆ ನಮ್ಮ ಸರ್ವಿಸ್ ಮುಗಿದಂಗೆ ಎಂದು ತನ್ನ ಕೆಲಸ ಅತ್ಯಂತ ಅಪಾಯಕಾರಿಯೆಂದು ದುರ್ಗಪ್ಪ ವಿವರಿಸಿದ.

**21.** ಸಂದರ್ಭ, ಸ್ವಾರಸ್ಯ : [ಒಂದಕ್ಕೆ] –>3*1=3

[ಅ] ಕೋವಿ ಸಿಕ್ಕಿದೆ ಆದರೆ ಹೆಣ ಸಿಗಲಿಲ್ಲ.

ಆಯ್ಕೆ: ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ರಚಿಸಿದ 'ಕೃಷ್ಣೇಗೌಡನ ಆನೆ' ಎಂಬ ದೀರ್ಘ ಗದ್ಯ.

ಸಂದರ್ಭ: ಪೋಲೀಸರು ನಾಪತ್ತೆಯಾದ ನಾಗರಾಜನ ಕುರಿತು ಮಹಜರು ಮಾಡಿಕೊಂಡ ಸಂದರ್ಭದಲ್ಲಿ ಹೇಳಿದ ಮಾತಿದು.

ವಿವರಣೆ/ಸ್ವಾರಸ್ಯ: ನಾಗರಾಜನು ಏಕಾಏಕಿ ನಾಪತ್ತೆಯಾದುದು ದೊಡ್ಡ ಸಮಸ್ಯೆಯಾಗಿ ಹೋಯಿತು. ಆತನನ್ನು ಆನೆ ತುಳಿದು ಸಾಯಿಸಿತೋ, ಕೊಲೆಯಾದನೋ, ಆತ್ಮಹತ್ಯೆ ಮಾಡಿಕೊಂಡನೋ ಎಂಬ ಹಲವಾರು ಪ್ರಶ್ನೆಗಳು ಉಗಮವಾದವು. ಈ ನಡುವೆ ಪೋಲೀಸರು ಕಾಡೆಲ್ಲಾ ಹುಡುಕಾಡಿ ಮಹಜರು ಮಾಡಲು ಮುಂದಾದಾಗ ಈ ಮಾತು ಬರುತ್ತದೆ.

[ಆ] "ವೆಪನ್ ಸಾರ್, ವೆಪನ್ ನಮಗೆ ಮುಖ್ಯ"

ಆಯ್ಕೆ: ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ರಚಿಸಿದ 'ಕೃಷ್ಣೇಗೌಡನ ಆನೆ' ಎಂಬ ದೀರ್ಘ ಗದ್ಯ.

ಸಂದರ್ಭ: ಈ ಮಾತನ್ನು ಫಾರೆಸ್ಟರ್ ನಾಗರಾಜ್ ನಿರೂಪಕರಿಗೆ ಹೇಳುತ್ತಾನೆ.

ವಿವರಣೆ/ಸ್ವಾರಸ್ಯ: ನಿರೂಪಕರು ಫಾರೆಸ್ಟರ್ ನಾಗರಾಜನ ಕಚೇರಿಗೆ ಬಂದು ಮರಕಡಿದವನ ಮೇಲೆ ಕ್ರಮ ಕೈಗೊಳ್ಳುವುದನ್ನು ಬಿಟ್ಟು ನನ್ನ ಕೊಡಲಿ ತಂದು ಆಫೀಸಿನಲ್ಲಿಟ್ಟು ಕೊಂಡಿರುವುದೇಕೆಂದು ಕೇಳಿದರು. ಅದಕ್ಕೆ ಉತ್ತರಿಸುತ್ತಾ ನಾಗರಾಜನು "ವೆಪನ್ ಸಾರ್, ವೆಪನ್ ನಮಗೆ ಮುಖ್ಯ" ಎಂದು ಹೇಳಿ, ಕೋರ್ಟಿನಲ್ಲಿ ಅಪರಾಧಿಯು ಯಾವುದರಿಂದ ಮರ ಕಡಿಯುತ್ತಿದ್ದನೆಂದು ಪ್ರಶ್ನಿಸಿದರೆ ಹಾಜರುಪಡಿಸಲು ವೆಪನ್ ಮುಖ್ಯವಾದುದರಿಂದ ತಾನು ದುರ್ಗಪ್ಪನಿಂದ ಕೊಡಲಿಯನ್ನು ವಶಪಡಿಸಿಕೊಂಡಿರುವೆನೆಂದು ತಿಳಿಸಿದನು. ಅಲ್ಲದೆ, ಇಂತಹ ಕಾನೂನುಬಾಹಿರ ಅಪರಾಧಕ್ಕೆ ಕೊಡಲಿ ಕೊಟ್ಟುದೇಕೆಂದು ನಿರೂಪಕರನ್ನು ಪ್ರಶ್ನಿಸಿದನು.

**22.** ಐದಾರು ವಾಕ್ಯಗಳಲ್ಲಿ ಉತ್ತರಿಸಿ [ಒಂದಕ್ಕೆ] –> 4*1=4

[ಅ] ವೇಲಾಯುಧನ ಹೆಂಡತಿಗೆ ಆನೆಯ ಬಗ್ಗೆ ಸವತಿ ಮಾತ್ಸರ್ಯ ಮೂಡಲು ಕಾರಣಗಳೇನು?

ವೇಲಾಯುಧನ ಹೆಂಡತಿಗೆ ಆನೆಯ ಬಗ್ಗೆ ಒಂದು ರೀತಿಯ ವಿಚಿತ್ರವಾದ ಸವತಿ ಮಾತ್ಸರ್ಯವಿತ್ತು. ಆದ್ದರಿಂದಲೇ ಆಕೆ ವೇಲಾಯುಧ ಆನೆಯ ಜೊತೆ ಮಲಗಲು ಹೊರಟಾಗ 'ನೀನ್ಯಾವ ಸೀಮೆ ಗಂಡಸು' ಎಂದು ಜರೆದಳು. ಚೂರು ತಪ್ಪು ಮಾಡಿದರೂ ತನ್ನನ್ನು ಬಡಿಯುವ ಗಂಡನ ಬಗ್ಗೆ ಆಕೆಗೆ ಕೋಪ. ಸದರ ಕೊಟ್ಟರೆ ಹೆಣ್ಣಾನೆ ಏನು ಬೇಕಾದರೂ ಮಾಡುತ್ತೆ ಎಂದು ಆಕೆ ಹೀಯಾಳಿಸುವಳು. ವೇಲಾಯುಧ ಹಗಲು–ರಾತ್ರಿ ಹೆಣ್ಣಾನೆಯೊಡನೆ ಕೆಲಸಕ್ಕೆಂದು ತಿರುಗುವುದು ಆಕೆಯಲ್ಲಿ ಆನೆಯ ಬಗ್ಗೆ ಸವತಿ ಮಾತ್ಸರ್ಯ ಮೂಡಲು ಕಾರಣವಾಗಿತ್ತು. ಮದುವೆಯಾಗಿ ಹಲವು ವರ್ಷ ಕಳೆದಿದ್ದರೂ ತಾನಿನ್ನು ಬಸುರಿಯಾಗದಿರುವುದು ಆಕೆಯ ಆನೆ ದ್ವೇಷಕ್ಕೆ ಮೂಲ ಕಾರಣವಾಗಿತ್ತು. ಹೆಣ್ಣಾನೆಯು ವೇಲಾಯುಧನನ್ನು ತುಂಬಾ ಹಚ್ಚಿ ಕೊಂಡಿದ್ದು ಆಕೆಗೆ ಆನೆ ತನ್ನ ಪ್ರತಿಸ್ಪರ್ಧಿ ಎಂದು ತಿಳಿಯಲು ಕಾರಣವಾಗಿತ್ತು. ಹೆಣ್ಣಾದವಳು ತನ್ನ ಗಂಡ ಯಾವುದನ್ನು ಅತಿಯಾಗಿ ಹಚ್ಚಿಕೊಂಡರೂ ಅದು ತನ್ನ ಆಕರ್ಷಣ ಶಕ್ತಿಗೆ ಸವಾಲೆಂದೇ ಭಾವಿಸುತ್ತಾಳೆ. ಇದೇ ಬಗೆಯ ಭಾವನೆಯು ವೇಲಾಯುಧನ ಹೆಂಡತಿಗೆ ಆನೆಯ ಬಗ್ಗೆ ಇತ್ತೆನ್ನಬಹುದು.

[ಆ] ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆಯನ್ನು ವಿವರಿಸಿ.

ಕೃಷ್ಣೇಗೌಡನ ಆನೆಯು ಗೂಳೂರು ಮಠದ ಆನೆ ಹಾಕಿದ ಮರಿಯಾಗಿದ್ದು ಅದು ಹುಟ್ಟಿದ್ದು, ಬೆಳೆದಿದ್ದು ಎಲ್ಲವೂ ಊರಿನ ಜನಗಳ ನಡುವೆಯೇ ಆಗಿತ್ತು. ಹಾಗಾಗಿ ಅದಕ್ಕೆ ಕಾಡಿನ ಬಗ್ಗೆ, ಕಾಡಾನೆಗಳ ಬಗ್ಗೆ ಯಾವುದೇ ತಿಳಿವಳಿಕೆ ಇರಲಿಲ್ಲ. ಮೂಡಿಗೆರೆ ಪೇಟೆಗೆ ಚೆನ್ನಾಗಿ ಒಗ್ಗಿಕೊಂಡಿದ್ದ ಆನೆಯು ಯಾವುದೇ ಲಂಗುಲಗಾಮಿಲ್ಲದೆ ದನಕರುಗಳ ರೀತಿಯಲ್ಲಿ ತಿರುಗಿ ಕೊಂಡಿರುತ್ತಿತ್ತು. ಸ್ಕೂಲು ಮಕ್ಕಳು ದೂರದಿಂದಲೇ ಗೌರಿ ಎಂದು ಕೂಗಿದಾಗ ಸೊಂಡಿಲೆತ್ತಿ ಸಲಾಂ ಮಾಡುತ್ತಿತ್ತು. ದಾರಿ ಬದಿಯ ಪೆಟ್ಟಿಗೆ ಅಂಗಡಿಗಳವರು ಹಣ್ಣು ಖರ್ಚಾದ ಬಾಳೆಗೊನೆಗಳ ದಿಂಡು, ಸಿಪ್ಪೆಗಳು, ಜಜ್ಜಿ ಹಾಳಾದ ಹಣ್ಣುಗಳನ್ನು ಹ್ಅದಕ್ಕೆ ಕೊಡಲು ಇಟ್ಟಿರುತ್ತಿದ್ದರು. ಈ ಆನೆ ಪ್ರತಿನಿತ್ಯ ಎಲ್ಲಾ ಪೆಟ್ಟಿಗೆ ಅಂಗಡಿಗಳ ಬಳಿಗೂ ಹೋಗಿ ಅವನ್ನೆಲ್ಲಾ ಸೊಂಡಿಲಲ್ಲಿ ತಗೊಂಡು ತಿನ್ನುತ್ತಿತ್ತು. ಹೀಗೆ ಕೃಷ್ಣೇಗೌಡನ ಆನೆ ಗೌರಿಯು ಪೇಟೆಯಲ್ಲಿ ಹುಟ್ಟಿ ಪೇಟೆಯಲ್ಲೇ ಬೆಳೆದು ಆರಾಮವಾಗಿ ಓಡಾಡಿಕೊಂಡಿತ್ತು.

## ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ [ಕವಿ, ಕೃತಿ ಹಿನ್ನೆಲೆಯಲ್ಲಿ]

**23.** ಇಬ್ಬರು- ಕವಿ- ಕೃತಿ ಪರಿಚಯ: -> **4*2=08**

### [ಅ] ಬಸವಣ್ಣ:

ಕಾಲ: ೧೨ನೆಯ ಶತಮಾನ

ಊರು: ವಿಜಯಪುರ ಜಿಲ್ಲೆ, ಬಾಗೇವಾಡಿ ತಾಲ್ಲೂಕು, ಇಂಗಳೇಶ್ವರ

ತಂದೆ: ಮಾದರಸ, ತಾಯಿ: ಮಾದಲಾಂಬಿಕೆ, ಹೆಂಡತಿ: ಗಂಗಾಂಬಿಕೆ ಮತ್ತು ನೀಲಾಂಬಿಕೆ

ಗುರು: ಈಶಾನ್ಯ ಗುರುಗಳು, ಶಿಕ್ಷಣ: ಬ್ರಾಹ್ಮಣ ಕುಟುಂಬದಲ್ಲಿ ಜನನ. ಆಚಾರ, ಸಂಪ್ರದಾಯ ವಿರೋಧಿಸುವರು. ೧೬ನೆಯ ವಯಸ್ಸಿಗೆ ಮನೆಯನ್ನು ತೊರೆದು ಕೂಡಲಸಂಗಮದಲ್ಲಿ ಈಶಾನ್ಯ ಗುರುಗಳ ಆಶ್ರಯದಲ್ಲಿ ತತ್ವಶಾಸ್ತ್ರವನ್ನು ಅಧ್ಯಯನ ಮಾಡುವರು.

ಬಿರುದು: ಭಕ್ತಿಭಂಡಾರಿ, ವಿಶ್ವಗುರು

ಬಿಜ್ಜಳನ ಆಸ್ಥಾನದಲ್ಲಿ ಕರಣಿಕ, ಕೋಶಾಧಿಕಾರಿ

ಇವರ ಮೇಲೆ ಪ್ರಭಾವ ಬೀರಿದವರು: ದೇವರ ದಾಸಿಮಯ್ಯ, ಕೊಂಡಗುಳಿ ಕೇಶಿರಾಜ, ಮಾದರಚೆನ್ನಯ್ಯ ಮೊದಲಾದ ಆದ್ಯವಚನಕಾರರು.

ಸಾಹಿತ್ಯ ರಚನೆ: ಗದ್ಯವೂ ಅಲ್ಲದ, ಪದ್ಯವೂ ಅಲ್ಲದ ಸಾಹಿತ್ಯ ಪ್ರಕಾರವಾದ ವಚನಗಳ ರಚನೆ. ಇದುವರೆಗೂ ಸುಮಾರು ಸಾವಿರ ವಚನಗಳು ಲಭ್ಯವಾಗಿವೆ. ಸಮಾಜ ಪರಿವರ್ತನೆಯ ಕಾರ್ಯಕ್ಕೆ ಪೂರಕವಾಗಿ ವಚನಗಳ ರಚನೆಯಾಗಿದೆ. ಜನರ ಮೌಢ್ಯ, ಸಾಮಾಜಿಕ ಪಿಡುಗು ವಿರುದ್ಧ ಜನಾಂದೋಲನ. ಕಾಯಕದ ಮಹತ್ವ, ಏಕದೇವೋಪಾಸನೆಯನ್ನು ಸಾರಿದರು. ಇವರಿಂದ ಪ್ರಭಾವಿತರಾದ ಹರಿಹರ ಕವಿ ಬಸವಣ್ಣನನ್ನೂ ಒಳಗೊಂಡು ಅನೇಕ ಶಿವಶರಣರ ಮೇಲೆ ಕಾವ್ಯರಚಿಸಿದ. ಪ್ರಭಾವಕ್ಕೆ ಒಳಗಾದ ಇತರರು ವಚನ ಚಳುವಳಿಯ ಕಾಲದಲ್ಲಿನ ಎಲ್ಲ ವಚನಕಾರರಿಗೆ ಒಂದಲ್ಲಾ ಒಂದು ರೀತಿ ಸಂಬಂಧಿಸಿದಂತೆ ಬಸವಣ್ಣ ಕಂಡು ಬರುತ್ತಾರೆ. ಆಧುನಿಕ ವಚನಕಾರರಾದ ಪರಮೇಶ್ವರ ಭಟ್ಟರು, ಜಿ.ಪಿ.ರಾಜರತ್ನಂ ಪ್ರಭಾವಿತರು. ವಚನಗಳು ಭಾವಗೀತೆಯ ಅಂಶಗಳನ್ನು ಒಳಗೊಂಡಿದ್ದು ಇವನ್ನು ಹಾಡುತ್ತಾರೆ.

ಇವರ ಕಾರ್ಯಕ್ಷೇತ್ರ ಚಾಲುಕ್ಯರ ರಾಜಧಾನಿ ಕಲ್ಯಾಣ.

ತಮ್ಮ ಕೊನೆಗಾಲವನ್ನು ಕೂಡಲಸಂಗಮದಲ್ಲಿ ಕಳೆಯುವರು:

### [ಆ] ಪಿ.ಲಂಕೇಶ್:

ತಂದೆ ನಂದಿ ಬಸಪ್ಪ, ತಾಯಿ ದೇವೀರಮ್ಮ. ಊರು: ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ಕೊನಗನಹಳ್ಳಿ.

ಕಾಲ: ೧೮-೩-೧೯೩೫ ರಿಂದ ೨೫-೧-೨೦೦೦.

ವಿದ್ಯಾಭ್ಯಾಸ: ಮಾಧ್ಯಮಿಕದವರೆಗೆ ಕೊನಗನಹಳ್ಳಿ, ಪ್ರೌಢಶಾಲೆ, ಇಂಟರ್ ಶಿವಮೊಗ್ಗದಲ್ಲಿ, ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ.[ಆನರ್ಸ], ಮೈಸೂರಿನಲ್ಲಿ ಎಂ.ಎ. ಇಂಗ್ಲೀಷ್ ಪದವಿ.

ವೃತ್ತಿ: ಶಿವಮೊಗ್ಗದ ಸಹ್ಯಾದ್ರಿ ಕಾಲೇಜು, ಬೆಂಗಳೂರಿನ ಸೆಂಟ್ರಲ್ ಕಾಲೇಜು, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ೧೯೫೯ ರಿಂದ ೧೯೭೮ ವರೆಗೆ ಅಧ್ಯಾಪಕ ವೃತ್ತಿ. ವೃತ್ತಿ ಸ್ವಯಂ ನಿವೃತ್ತಿ ಪಡೆದು 'ಲಂಕೇಶ್ ಪತ್ರಿಕೆ' ಆರಂಭ. ಹರಿತ ಬರವಣಿಗೆಯಿಂದ ಜಾಹೀರಾತು ರಹಿತ ಪತ್ರಿಕೆ ಕನ್ನಡ ಜಾಣಜಾಣೆಯರ ಮನಗೆದ್ದರು. ಕಥಾ ಸಾಹಿತ್ಯ ಪ್ರಕಾರಕ್ಕೆ ಶ್ರೇಷ್ಟ ಕೊಡುಗೆ.

ಕಥಾಸಂಕಲನಗಳು: ಕೆರೆಯ ನೀರನು ಕೆರೆಗೆ ಚೆಲ್ಲಿ, ಕಲ್ಲು ಕರಗುವ ಸಮಯ, ನಾನಲ್ಲ, ಉಮಾಪತಿಯ ಸ್ಕಾಲರ್ ಶಿಪ್ ಯಾತ್ರೆ, ಉಲ್ಲಂಘನೆ, ಮಂಜು ಕವಿದ ಸಂಜೆ. ಕಾದಂಬರಿಗಳು: ಬಿರುಕು, ಮುಸ್ಸಂಜೆಯ ಕಥಾಪ್ರಸಂಗ, ಅಕ್ಕ. ನಾಟಕಗಳು: ಬಿರುಕು, ಸಂಕ್ರಾಂತಿ, ತೆರೆಗಳು, ಈಡಿಪಸ್ ಮತ್ತು ಅಂತಿಗೊನೆ, ಗುಣಮುಖ, ಟಿ.ಪ್ರಸನ್ನನ ಗೃಹಸ್ಥಾಶ್ರಮ, ನನ್ನ ತಂಗಿಗೊಂದು

ಗಂಡು ಕೊಡಿ, ಕ್ರಾಂತಿ ಬಂತು ಕ್ರಾಂತಿ. ಕವನ ಸಂಕಲನಗಳು: ಬಿಚ್ಚು, ಚಿತ್ರ ಸಮೂಹ, ನೀಲು ಕಾವ್ಯ ಸಂಗ್ರಹ ೧,೨,೩ ಅಕ್ಷರ ಹೊಸ ಕಾವ್ಯ, ಪಾಪದ ಹೂಗಳು. ಅಂಕಣ ಬರೆಹಗಳ ಸಂಗ್ರಹ: ಟೀಕೆ ಟಿಪ್ಪಣಿ ೧,೨,೩ ಮರೆಯುವ ಮುನ್ನ ಸಂಗ್ರಹ ೧,೨,೩ ಮನಕೆ ಕಾರಂಜಿಯ ಸ್ಪರ್ಶ, ಈ ನರಕ ಈ ಪುಲಕ, ಆಟ–ಜೂಜು–ಮೋಜು, ಸಾಹಿತಿ ಸಾಹಿತ್ಯ ವಿಮರ್ಶೆ, ರೂಪಕ ಲೇಖಕರು, ಕಂಡದ್ದು ಕಂಡ ಹಾಗೆ. ಪ್ರಸ್ತುತ, ಪಾಂಚಾಲಿ. ಆತ್ಮಕಥೆ: ಹುಳಿ ಮಾವಿನ ಮರ

ಚಲನಚಿತ್ರ ನಿರ್ದೇಶಕನಾಗಿ: ಪಲ್ಲವಿ ಚಲನಚಿತ್ರಕ್ಕೆ ಕೇಂದ್ರ ಸರ್ಕಾರದ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ, ಅನುರೂಪ, ಖಂಡವಿದೆ ಕೊ ಮಾಂಸವಿದೆ ಕೊ,

ಎಲ್ಲಿಂದಲೊ ಬಂದವರು ಸಿನಿಮಾಗಳಲ್ಲಿ ನಟನೆಯನ್ನೂ ಮಾಡಿದ್ದಾರೆ.

ಪ್ರಶಸ್ತಿ ಪುರಸ್ಕಾರ: ಅಂಕಣ ಬರೆಹಗಳ ಸಂಗ್ರಹ 'ಕಲ್ಲು ಕರಗುವ ಸಮಯ' ಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯ ನಾಟಕ ಅಕಾಡೆಮಿ ಪ್ರಶಸ್ತಿ, ಆರ್ಯಭಟ ಸಾಹಿತ್ಯ ಪ್ರಶಸ್ತಿ. ಪ್ರಭಾವಿತರು: ಪೂರ್ಣಚಂದ್ರ ತೇಜಸ್ವಿ, ರವಿ ಬೆಳಗೆರೆ, ತ್ಯಾಗಿ, ಜೋಗಿ ಹಲವಾರು ಪತ್ರಕರ್ತರು.

[ಇ] ಮುದ್ದಣ:

ಹೆಸರು: ಲಕ್ಷ್ಮೀನಾರಾಯಣ. ಊರು: ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ನಂದಳಿಕೆ.
ತಂದೆ: ಪಾಟಾಳಿ ತಿಮ್ಮಪ್ಪ, ತಾಯಿ: ಮಹಾಲಕ್ಷ್ಮಮ್ಮ
ಕಾಲ: ಜನನ:೨೪–೦೧–೧೮೭೦ ಮರಣ: ೧೬–೦೨–೧೯೦೨ ಕೇವಲ ೩೨ ವರ್ಷಗಳು.
ಪತ್ನಿ: ಕಮಲಾಬಾಯಿ, ಮಗ: ರಾಧಾ ಕೃಷ್ಣ
ಶಿಕ್ಷಣ: ಪ್ರಾಥಮಿಕ ಶಿಕ್ಷಣ ನಂದಳಿಕೆ, ಮಾಧ್ಯಮಿಕ ಶಿಕ್ಷಣ: ಉಡುಪಿ. ದೈಹಿಕ ಶಿಕ್ಷಕರ ತರಬೇತಿ ಪಡೆದು ಕೆಲವರ್ಷ ವ್ಯಾಯಾಮ ಶಿಕ್ಷಕರಾಗಿ ಕಾರ್ಯ ನಿರ್ವಹಣೆ. ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಕನ್ನಡ ಪಂಡಿತರಾಗಿ ಕೆಲಸ ಮಾಡಿದರು.
ಕೃತಿಗಳು: ಯಕ್ಷಗಾನ ಪ್ರಸಂಗಗಳಾದ ರತ್ನಾವತೀ ಕಲ್ಯಾಣ, ಕುಮಾರ ರಾಮ ವಿಜಯ, ಜೋಜೋ.
ಕಾಲ್ಪನಿಕ ಕಾದಂಬರಿ: ಗೋದಾವರಿ[ಅಪೂರ್ಣ]
ಪ್ರಭಾವ ಬೀರಿದವರು: ಪಂಜೆ ಮಂಗೇಶರಾಯರು, ಮಳಲಿ ಸುಬ್ಬರಾವ ಅವರು.
ಪ್ರಭಾವ ಬೀರಿದ ಅಂಶ: ಧಾರ್ಮಿಕ ವಾತಾವರಣ, ಊರಿನ ವಾತಾವರಣ, ಶಾಲೆಯಲ್ಲಿ ಕಲಿತದ್ದು, ಯಕ್ಷಗಾನ ಪ್ರಸಂಗಗಳು.
ಅಮ್ಮ ಮುದ್ದಿನಿಂದ ಕರೆಯುತ್ತಿದ್ದ ಮುದ್ದಣ ಎಂಬ ಹೆಸರೆ ಕವಿಯ ಕಾವ್ಯನಾಮವಾಯಿತು. ಈತನ ಕ್ರಾಂತಿಕಾರಿ ವಿಚಾರಗಳಿಂದ, ಸಾಹಿತ್ಯದಲ್ಲಿ ತಂದ ಬದಲಾವಣೆಗಳಿಂದ, 'ಹೊಸಗನ್ನಡ ಅರುಣೋದಯದ ಮುಂಗೋಳಿ' ಎಂದೇ ಪ್ರಸಿದ್ಧನಾದ. ಬಡತನ ಮತ್ತು ಆಗಿನ ಕಾಲಕ್ಕೆ ವಾಸಿಮಾಡಲಾಗದ ಕ್ಷಯರೋಗಕ್ಕೆ ಚಿಕ್ಕ ವಯಸ್ಸಿನಲ್ಲೆ ತುತ್ತಾಗಿ ತನ್ನ ೩೨ ನೆಯ ವಯಸ್ಸಿನಲ್ಲಿಯೇ ನಿಧನನಾದನು. ಮುದ್ದಣ ಆಧುನಿಕ ಸಾಹಿತಿಗಳಿಗೆ ಪ್ರೇರಣೆ ನೀಡುವವನಾಗಿದ್ದಾನೆ.
"ಮುದ್ದಣನವರಿಗಿಂತ ಒಳ್ಳೆಯ ಕವಿ ಬೇರಾರಿಲ್ಲ" – ಶ್ರೀ ಪಂಜೆ ಮಂಗೇಶರಾಯರು.

[ಈ] ವೀರೇಂದ್ರ ಸಿಂಪಿ:

ಜನನ: ೧೪–೧೦–೧೯೩೮. ತಂದೆ: ಸಿಂಪಿ ಲಿಂಗಣ್ಣ. ತಾಯಿ: ಸೊಲಬವ್ವ. ಊರು: ಇಂಡಿ ತಾಲ್ಲೂಕಿನ ಚಡಚಣ.
ಶಿಕ್ಷಣ: ಬಿಜಾಪುರದ ವಿಜಯಾ ಕಾಲೇಜಿನಿಂದ ಬಿ.ಎ.ಪದವಿ ೧೯೬೨ರಲ್ಲಿ. ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ.
ವೃತ್ತಿ: ಪ್ರಾಧ್ಯಾಪಕರು. ಬಿ.ವಿ.ಭೂಮರೆಡ್ಡಿ ಕಾಲೇಜು.
ಕಥಾಸಂಕಲನ: ಖೊಟ್ಟಿ ನಾಣ್ಯ.
ಪ್ರಬಂಧ ಸಂಕಲನ: ಕಾಗದದ ಚೂರು, ಭಾವ ಮೈದುನ, ಸ್ವಚ್ಛಂದ ಮನದ ಸುಳಿಗಾಳಿ, ಪರಸ್ಪರ ಸ್ಪಂದನ.
ಜೀವನಚರಿತ್ರೆ: ಮಾಸ್ತಿ ವೆಂಕಟೇಶ ಅಯ್ಯಂಗಾರ್, ಮಾದರ ಚೆನ್ನಯ್ಯ.
ಹಲವಾರು ಅನುವಾದ ಕೃತಿಗಳು, ಸಂಪಾದನೆ, ವೈಚಾರಿಕ ಲೇಖನಗಳು.
ಪ್ರಶಸ್ತಿ,ಗೌರವಗಳು: ಭಾವ ಮೈದುನ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ, ಸ್ವಚ್ಛಂದ ಮನದ ಸುಳಿಗಾಳಿ ಪ್ರಬಂಧ ಸಂಕಲನವು ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ಪಠ್ಯವಾಗಿ ಆಯ್ಕೆ, ಪರಿಸರದ ಸ್ಪಂದನಕ್ಕೆ ಗುಲ್ಬರ್ಗಾ ವಿಶ್ವವಿದ್ಯಾಲಯದ ಬಹುಮಾನ, ರಾಜ್ಯ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ವಿಜಯಪುರ ಜಿಲ್ಲೆ ಹಾಗೂ ಬೀದರ್ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿ.

*******************************************************************************